# ಪಂಚಾಯತ್ ರಾಜ್ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಬೇಕಾದ ಪ್ರಮುಖ ವಿಷಯಗಳು:

## *1. ಗ್ರಾಮ ಸ್ವರಾಜ್ ಕಾಯ್ದೆಗೆ ತರಲು ಹೊರಟಿರುವ ಪ್ರಸ್ತಾಪಿತ ತಿದ್ದುಪಡಿಗಳು:*

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ (ತಿದ್ದುಪಡಿ) ಮಸೂದೆ 2020, ಇದನ್ನು ಅಧ್ಯಯನ ಮಾಡಿದಾಗ ಪ್ರಸ್ತುತ ಇರುವಗ್ರಾಮ ಸ್ವರಾಜ್ ಕಾಯಿದೆಗೆ ಒಟ್ಟೂ 36 ತಿದ್ದುಪಡಿಗಳನ್ನು ಸರ್ಕಾರ ಪ್ರಸ್ತಾಪಿಸುತ್ತಿದೆ. ಅವುಗಳಲ್ಲಿ ಗ್ರಾಮ ಸ್ವರಾಜ್ ಕಾಯಿದೆಯ ಆಶಯವನ್ನು ಬದಿಗೊತ್ತುವ ಹಾಗೂ ಆ ಮೂಲಕ ಗ್ರಾಮ ಸ್ವರಾಜ್ ಸಾಕಾರಗೊಳ್ಳುವಿಕೆಯನ್ನು ತಡೆಯುವ ಕೆಲವು ಪ್ರಮುಖ ತಿದ್ದುಪಡಿಗಳು ಹೀಗಿವೆ:

1) **ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಮೀಸಲಾತಿ (ಪ್ರಕರಣ 5, ಉಪ ಪ್ರಕರಣ 4ರಲ್ಲಿ 1ನೇ ಪರಂತುಕ):** ಪ್ರಮುಖವಾಗಿ ಗ್ರಾಮ/ತಾಲೂಕು/ಜಿಲ್ಲಾ ಪಂಚಾಯತ್‌ನಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳನ್ನು ಗಮನದಲ್ಲಿಟ್ಟುಕೊಂಡು ಅದರಲ್ಲೂ ವಿಶೇಷವಾಗಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿ ಸದಸ್ಯತ್ವ ಸ್ಥಾನಕ್ಕೆ ಇರುವ 10 ವರ್ಷಗಳ ಅವಧಿಯ ಮೀಸಲಾತಿಯನ್ನು 5 ವರ್ಷಗಳಿಗೆ ಕಡಿತಗೊಳಿಸಲು ಪ್ರಸ್ತಾಪಿಸಲಾಗಿದೆ. ಈ ಅವಧಿಯ ಮೀಸಲಾತಿಯು ಕೇವಲ ಕಾನೂನು, ನಿಯಮ ಮತ್ತು ಪ್ರಕ್ರಿಯೆಗಳ ಸಾಮರ್ಥ್ಯಾಭಿವೃದ್ಧಿಯನ್ನಷ್ಟೇ ಗಮನದಲ್ಲಿಡದೇ, ಅವರ ಆತ್ಮವಿಶ್ವಾಸವನ್ನು ಬೆಳೆಸಲು ಹಾಗೂ ಸರ್ಕಾರ ಮತ್ತು ಆಡಳಿತದ ಬಗ್ಗೆ ಸಕಾರಾತ್ಮಕ ಮನೋಭಾವ ಬೆಳೆಸುವಲ್ಲಿ ಸಹಕಾರಿಯಾಗಿರಲೆಂದು ನೀಡಿದ ಅವಧಿಯಾಗಿತ್ತು. ಇದು ವಿಕೇಂದ್ರೀಕರಣದ, ಪ್ರಜಾಸತ್ತಾತ್ಮಕ ಅಧಿಕಾರ ಹಸ್ತಾಂತರ, ಗ್ರಾಮ ಸಭೆಗೆ ತಮ್ಮ ಉತ್ತರದಾಯಿತ್ವ ಹಾಗೂ ತಮ್ಮ ಕ್ಷೇತ್ರದ ಅಗತ್ಯತೆಗಳನ್ನು ಪೂರೈಸಲು ಇರುವ ಬದ್ಧತೆಯನ್ನು ಆಳವಾಗಿ ಅರ್ಥ ಮಾಡಿಕೊಳ್ಳುವ ಮನೋಭಾವವವನ್ನು ಬೆಳೆಸಿಕೊಳ್ಳಲು ಒತ್ತು ನೀಡುತ್ತಿತ್ತು.

2) **ಸದಸ್ಯರ ಅನರ್ಹತೆ (ಪ್ರಕರಣ12):** ಪ್ರಸ್ತುತ ಇರುವ ಕಾಯಿದೆಯು ಯಾವುದೇ ಸದಸ್ಯನು ತನ್ನ ಸದಸ್ಯತ್ವದ ಅವಧಿಯಲ್ಲಿ ಪಂಚಾಯತ್‌ನ ನಿಧಿಯ ಅಥವಾ ಇತರ ಆಸ್ತಿಗಳ ದುರುಪಯೋಗ ಅಥವಾ ಪಂಚಾಯತ್‌ನ ಯಾವುದೇ ಕಾರ್ಯಕ್ರಮವನ್ನು, ಯೋಜನೆಯನ್ನು ಅಥವಾ ಪ್ರಾಜೆಕ್ಟನ್ನು ಜಾರಿಗೊಳಿಸುವಾಗ ಪಂಚಾಯತ್ ಸದಸ್ಯನಾಗಿ ಅವನು ತನ್ನ ಅಧಿಕಾರವನ್ನು ಅಥವಾ ಪ್ರಾಧಿಕಾರವನ್ನು ದುರುಪಯೋಗ ಅಥವಾ ದುರ್ಬಳಕೆ ಮಾಡಿಕೊಳ್ಳುವ ಯಾವುದೇ ಕೃತ್ಯದಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗಿರುವ ತಪ್ಪಿತಸ್ಥನೆಂದು ಕಂಡು ಬಂದರೆ ಅಂತಹ ವ್ಯಕ್ತಿಯು, ಗ್ರಾಮ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು ಎಂದು ಹೇಳಿದೆ. **ಆದರೆ ಪ್ರಸ್ತಾಪಿಸಿರುವ ತಿದ್ದುಪಡಿಯು ಈ ಅನರ್ಹತೆಯನ್ನು ಕೇವಲ 6 ವರ್ಷಕ್ಕೆ ಸೀಮಿತಗೊಳಿಸಿದೆ. ಅಂದರೆ ಪ್ರಸ್ತುತ ಇರುವ ಅವಧಿಗಿಂತ ಹೆಚ್ಚೆಂದರೆ ಇನ್ನೊಂದು ಅವಧಿಗೆ ಮಾತ್ರ ಆ ವ್ಯಕ್ತಿ ಅನರ್ಹನಾಗಿರುತ್ತಾನೆ/ಳೆ!**

3) **ಸದಸ್ಯರನ್ನು ತೆಗೆದು ಹಾಕುವುದು (ಪ್ರಕರಣ 43ಎ, ಉಪ ಪ್ರಕರಣ 1):** – ತಿದ್ದುಪಡಿ ಮಸೂದೆಯು ಯಾವುದೇ ಸದಸ್ಯರು ಪಂಚಾಯತ್ ಸಭೆಗೆ ತಾನು ಗೈರು ಹಾಜರಾಗುವ ಕುರಿತಾಗಿ ರಜಾ ಅರ್ಜಿಯನ್ನು ಸಲ್ಲಿಸಿದ್ದರೆ ಹಾಗೂ ಪಂಚಾಯತ್ ಈ ಅರ್ಜಿಯ ದಿನಾಂಕದಿಂದ 7 ದಿನಗಳೊಳಗೆ ಆ ಬಗ್ಗೆ ತನ್ನ ನಿರ್ಧಾರವನ್ನು ಸದಸ್ಯರಿಗೆ ತಿಳಿಸಿದಿದ್ದರೆ, ರಜಾ ಮಂಜೂರಾಗಿದೆ ಎಂದು ಪರಿಗಣಿಸಲಾಗುತ್ತದೆ.

ಈ ತಿದ್ದುಪಡಿಯು ಮೊದಲನೆಯದಾಗಿ ಸದಸ್ಯರಿಗೆ ಸಭೆಗೆ ಗೈರು ಹಾಜರಾಗಲು, ಸಬೂಬು ನೀಡಲು ಅವಕಾಶ ಮಾಡಿಕೊಡುತ್ತದೆ. ಅಲ್ಲದೇ ಯಾರು ರಜಾ ಅರ್ಜಿಯ ಬಗ್ಗೆ ನಿರ್ಣಯ ತೆಗೆದುಕೊಳ್ಳುವವರು ಎಂಬುದನ್ನು ಸ್ಪಷ್ಟಪಡಿಸದೇ ಕೇವಲ ಗ್ರಾಮ ಪಂಚಾಯತ್ ಎಂದು ಹೇಳಿದೆ. ಇದರಿಂದಾಗಿ ಗ್ರಾಮ ಪಂಚಾಯತ್ ಎಂದರೆ ಎಲ್ಲಾ ಸದಸ್ಯರನ್ನೊಳಗೊಂಡಂತಹ ವ್ಯವಸ್ಥೆ. ಕೇವಲ ರಜಾ ಅರ್ಜಿಯ ವಿಷಯಕ್ಕೆ ಎಲ್ಲರನ್ನೂ ಸೇರಿಸಿ ಸಭೆ ಕರೆಯುವುದು ಅಥವಾ ಕರೆ ಮಾಡಿ ನಿರ್ಣಯ ತೆಗೆದುಕೊಳ್ಳುವುದು ಸಾಧ್ಯವಿಲ್ಲದ ಮಾತು. ಇದರ ಬದಲಾಗಿ ರಮೇಶ ಕುಮಾರ್ ಸಮಿತಿಯ ಶಿಫಾರಸ್ಸಿನಂತೆ ಗ್ರಾಮ ಸಭೆಗೆ ಸದಸ್ಯರನ್ನು ಹಿಂದಕ್ಕೆ ಕರೆಸಿಕೊಳ್ಳುವ ಅಧಿಕಾರ ನೀಡಬೇಕು.

4) **ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿ ಮತ್ತು ಸೇವೆಯ ನಿಯಮಗಳು (ಪ್ರಕರಣ 46, ಉಪಪ್ರಕರಣ 1):** ಪ್ರಸ್ತಾಪಿತ ತಿದ್ದುಪಡಿಯು ಗ್ರಾಮ ಸ್ವರಾಜ್ ಕಾಯಿದೆಯು ನೀಡಿರುವ 5 ವರ್ಷಗಳ ಅಧಿಕಾರಾವಧಿಯನ್ನು ಪುನಃ 30 ತಿಂಗಳಿಗೆ ಸೀಮಿತಗೊಳಿಸುತ್ತದೆ. ಗ್ರಾಮ ಸ್ವರಾಜ್ ಕಾಯಿದೆಯ ರಚನೆಯ ಸಂದರ್ಭದಲ್ಲಿ ಆಗಿರುವ ಅಧಿಕಾರಾವಧಿ 30 ತಿಂಗಳಿನಿಂದ ಉಂಟಾಗುತ್ತಿರುವ ಸಮಸ್ಯೆಗಳನ್ನು ಮನಗಂಡೇ 5 ವರ್ಷಗಳ ವರೆಗೆ ಅಧಿಕಾರಾವಧಿ ಎಂದು ತಿದ್ದುಪಡಿ ಮಾಡಲಾಗಿತ್ತು. ಸ್ಥಳೀಯ ಮಟ್ಟದಲ್ಲಿ ಅಧಿಕಾರಕ್ಕಾಗಿ ಕುದುರೆ ವ್ಯಾಪಾರಕ್ಕೆ, ಕುರ್ಚಿಗಾಗಿ ಕಾದಾಟಕ್ಕೆ ತಡೆ ಹಾಕಲು ಮತ್ತು ಜನರಿಗೆ ಉತ್ತರದಾಯಿಯಾಗಿ ಆ ಸಮಯವನ್ನು ಕ್ಷೇತ್ರದ ಅಭಿವೃದ್ಧಿಯತ್ತ ಗಮನ ನೀಡುವಂತೆ ಮಾಡಲು ಈ ಬದಲಾವಣೆ ಮಾಡಲಾಗಿತ್ತು.

5) **ಗ್ರಾಮ ಪಂಚಾಯತಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ವಿರುದ್ಧ ಅವಿಶ್ವಾಸ ಸೂಚನೆ (ಪ್ರಕರಣ 49, ಉಪ ಪ್ರಕರಣ 1ರಲ್ಲಿ 2ನೇ ಮತ್ತು 3ನೇ ಪರಂತುಕ):** ತಿದ್ದುಪಡಿ ಮಸೂದೆಯು ಅವಿಶ್ವಾಸ ಗೊತ್ತುವಳಿ ಅವಧಿಯನ್ನು 30 ತಿಂಗಳಿನಿಂದ 15 ತಿಂಗಳಿಗೆ ಕಡಿತಗೊಳಿಸಿದೆ. ಅದಕ್ಕೆ ಪೂರಕವಾಗಿ ಅಂತಹ


***ಸ್ಫೂರ್ತಿದಾತರು:***

**ಶ್ರೀ ಎಲ್.ಸಿ.ಜೈನ್,**
ಮಾಜಿ ಸದಸ್ಯರು, ರಾಷ್ಟ್ರೀಯ ಯೋಜನಾ ಆಯೋಗ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ಭಾರತೀಯ ರಾಯಭಾರಿಗಳು

**ಶ್ರೀ ಮನು ಕುಲಕರ್ಣಿ,** ಗೌರವಾನ್ವಿತ ಹಿರಿಯ ಫೆಲೋ, ಸಾಮಾಜಿಕ ವಿಜ್ಞಾನಗಳ ಸಂಸ್ಥೆ, ಬೆಂಗಳೂರು

***ಸಲಹಾ ಸಮಿತಿ ಸದಸ್ಯರು:***

**ಡಾ. ವಿನೋದ್ ವ್ಯಾಸುಲು,**
ವಿಕೇಂದ್ರೀಕರಣ ಚಿಂತಕರು

**ಶ್ರೀ ಚಿರಂಜೀವ್ ಸಿಂಗ್** ಬೆಂಗಳೂರು, ಮಾಜಿ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರಕಾರ

**ಶ್ರೀ ಮೀನಾಕ್ಷಿ ಸುಂದರಂ,** ಮಾಜಿ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ, ಭಾರತ ಸರಕಾರ

**ಶ್ರೀ ರಘುನಂದನ್ ರಾಘವನ್,**
ಮಾಜಿ ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ ಭಾರತ ಸರ್ಕಾರ, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ

**ಶ್ರೀ. ಮಹಿಮಾ ಪಟೇಲ್**
ಟ್ರಸ್ಟೀ, ಜೆ.ಹೆಚ್. ಪಟೇಲ್ ಫೌಂಡೇಶನ್

**ಶ್ರೀ ಮೈಕೆಲ್ ಫೆರ್ನಾಂಡಿಸ್**
ಕಾರ್ಮಿಕ ಮುಖಂಡರು

**ಶ್ರೀ ವಿನಯ್ ಬೈಂದೂರು**
ಸಂಶೋಧಕರು, ವಿಕೇಂದ್ರಿಕರಣ

**ಶ್ರೀಮತಿ ನಂದನಾ ರೆಡ್ಡಿ**
ಸಂಚಾಲಕರು

***ಸಂಯೋಜನಾ ಸಮಿತಿ:***

**ಗ್ರಾಮ ಸ್ವರಾಜ್ಯ ವೇದಿಕೆ**
**ಮಹಿಳಾ ಸಮಖ್ಯ ಕರ್ನಾಟಕ**
**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
**ಸುಗ್ರಾಮ**
**ಜೆ.ಹೆಚ್.ಪಟೇಲ್ ಫೌಂಡೇಶನ್**



***ಸಂಯೋಜಕರು:***

**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
303/2, ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ವಿಮಾನಪುರ ಅಂಚೆ
ಬೆಂಗಳೂರು–560 017
ಫೋನ್: 080–25234270, 25234272, 25234611

ನಿರ್ಣಯವನ್ನು ನೀಡಿದ ದಿನಾಂಕದಿಂದ 6 ತಿಂಗಳ ಒಳಗೆ ನೀಡತಕ್ಕದ್ದಲ್ಲ ಎಂದಿದೆ (ಗ್ರಾಮ ಸ್ವರಾಜ್ ಕಾಯಿದೆಯಲ್ಲಿರುವ 2 ವರ್ಷದ ಬದಲಾಗಿ). ಇದೂ ಸಹ ಪಂಚಾಯತ್‌ನಲ್ಲಿ ಜನಪರ ಅಭಿವೃದ್ಧಿಯನ್ನು ಕಡೆಗಣಿಸಿ ಕೇವಲ ಅಧಿಕಾರದಾಹಿಯಾಗಿ ಸಂಗೀತ ಕುರ್ಚಿಯ ಆಟಕ್ಕೆ, ಪಕ್ಷ ರಾಜಕೀಯಕ್ಕೆ, ಕುದುರೆ ವ್ಯಾಪಾರಕ್ಕೆ ಎಡೆ ಮಾಡಿಕೊಡುತ್ತದೆ.

6) **ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟುವುದು (ಪ್ರಕರಣ 308ಎಸಿ):** ಪ್ರಸ್ತಾಪಿತ ತಿದ್ದುಪಡಿಯು ಎಲ್ಲಾ ಮತಗಟ್ಟೆಗಳಲ್ಲಿ ಚುನಾವಣಾ ಸಂದರ್ಭದಲ್ಲಿ ಪಾರದರ್ಶಕತೆಯನ್ನು ಎತ್ತಿ ಹಿಡಿಯಲು ಮಾಡಬೇಕಾಗಿದ್ದ ವಿಡಿಯೋ ಚಿತ್ರೀಕರಣವನ್ನು ಕೇವಲ ಅತಿಸೂಕ್ಷ್ಮ ವಲಯಗಳಿಗೆ ಮಾತ್ರ ಸೀಮಿತಗೊಳಿಸಿದೆ. ಅಲ್ಲದೇ ಯಾವ ಪಂಚಾಯತ್ ಪ್ರದೇಶದಲ್ಲಿ ನೀತಿ ಸಂಹಿತೆಯು ಜಾರಿಯಲ್ಲಿರುತ್ತದೆಯೋ ಆ ಪಂಚಾಯತ್ ಪ್ರದೇಶದ **ಒಳಗೆ ನೀತಿ ಸಂಹಿತೆಯು ಜಾರಿಯಲಿಲ್ಲುವ ಇಡೀ ಅವಧಿವರೆಗೆ** ಎಲ್ಲಾ ಮದ್ಯದ ಅಂಗಡಿಗಳನ್ನು ಹಾಗೂ ಮದ್ಯ ತಯಾರಿಕಾ ಘಟಕಗಳನ್ನು ಮುಚ್ಚತಕ್ಕದ್ದು ಎಂಬುದನ್ನು ಬದಲಾಯಿಸಿ **ಕೇವಲ ಮತದಾನ ನಡೆಯುವ 48 ಗಂಟೆಗಳ ಮೊದಲು** ಎಂದು ಸೀಮಿತಗೊಳಿಸಿದೆ. ಅಲ್ಲದೇ ಮದ್ಯದ ಅಂಗಡಿಗಳ ಮತ್ತು ಮದ್ಯ ತಯಾರಿಕಾ ಘಟಕಗಳ ಮಾಲೀಕರು, ಅಧಿಬೋಗದಾರರು ಮತ್ತು ಸಂದರ್ಭಾನುಸಾರವಾಗಿ ವ್ಯವಸ್ಥಾಪಕರು **ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿರುವ ಅವಧಿಯಲ್ಲಿ** ತಮ್ಮ ಘಟಕಗಳನ್ನು ಮುಚ್ಚತಕ್ಕದ್ದು ಮತ್ತು ಮೊಹರು ಮಾಡಿ ಕೀಯನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿಕಾರ ವ್ಯಾಪಿಯುಳ್ಳ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರಿಗೆ ಒಪ್ಪಿಸತಕ್ಕದ್ದು ಎಂಬುದನ್ನೂ ಸಹ **ಕೇವಲ ಮತದಾನ ನಡೆಯುವ 48 ಗಂಟೆಗಳ ಮೊದಲು ಎಂದು ಸೀಮಿತಗೊಳಿಸಿದೆ. ಇದು ಚುನಾವಣೆಯಲ್ಲಿ ಜನರನ್ನು ಆಮಿಷಕ್ಕೊಳಪಡಿಸಲು, ತಮಗಿರುವ ಅಧಿಕಾರವನ್ನು ಉಪಯೋಗಿಸಿ, ವ್ಯವಸ್ಥೆಯನ್ನು ತಮಗೆ ಬೇಕಾದಂತೆ ಬಳಸಿಕೊಳ್ಳಲು, ಆ ಮೂಲಕ ಜನರ ಮೇಲೆ ಪ್ರಭಾವ ಬೀರಲು, ಕಾನೂನು ಮತ್ತು ನೀತಿ ನಿಯಮಗಳನ್ನು ತಮಗೆ ಬೇಕಾದಂತೆ ದುರುಪಯೋಗಪಡಿಸಿಕೊಳ್ಳಲು ದಾರಿ ಮಾಡಿಕೊಡುತ್ತದೆ. ಅಲ್ಲದೇ ಮದ್ಯ ಮಾರಾಟಗಾರರ ಹಂಗಿಗೆ ಒಳಪಟ್ಟು ಸರ್ಕಾರ ಈ ನಿರ್ಧಾರ ಕೈಗೊಂಂಡಂತಿದೆ. ಆ ಮೂಲಕ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವ ಪ್ರಯತ್ನಕ್ಕೆ ಇದು ಎಡೆ ಮಾಡಿಕೊಡುತ್ತದೆ.**

***2. ವಸತಿ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸಲು ಸಂಬಂಧಿಸಿದಂತೆ ವಸತಿ ಸಚಿವರು ಆಗಾಗ ನೀಡುತ್ತಿರುವ ಹೇಳಿಕೆಗಳು / ಸರ್ಕಾರದ ನಡೆ:***

'ಅಕ್ರಮ ಎಸಗುವ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಮತ್ತು ಗ್ರಾಮ ಸಭೆಗಳು ತಯಾರಿಸುವ ಫಲಾನುಭವಿಗಳ ಪಟ್ಟಿಗೆ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಸಿ.ಇ.ಓ. ತಹಶೀಲ್ದಾರ್ ಹಾಗೂ ಶಾಸಕರ ಒಪ್ಪಿಗೆ ಪಡೆಯುವುದನ್ನು ಕಡ್ಡಾಯ ಮಾಡಲು ಕಾಯಿದೆಗೆ ತಿದ್ದುಪಡಿ ಮಾಡಲಾಗುವುದು'! 'ಆಶ್ರಯ ಮನೆಗಳಿಗೆ ಫಲಾನುಭವಿಗಳ ಪಟ್ಟಿ ತಯಾರಿಸಿದ ಬಳಿಕ ಅದಕ್ಕೆ ಗ್ರಾಮ ಸಭೆಯ ಒಪ್ಪಿಗೆ ಇನ್ನು ಮುಂದೆ ಅಂತಿಮವಲ್ಲ. ಶಾಸಕರು, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಸಿ.ಇ.ಓ, ತಹಶೀಲ್ದಾರ್, ಪಿ.ಡಿ.ಓ.ಗಳನ್ನು ಒಳಗೊಂಡ ಉಸ್ತುವಾರಿ ಸಮಿತಿ ರಚಿಸಲಾಗುತ್ತದೆ. ಫಲಾನುಭವಿಗಳ ಪಟ್ಟಿಗೆ ಸಮಿತಿ ಒಪ್ಪಿಗೆ ಕಡ್ಡಾಯ. ಫಲಾನುಭವಿಗಳು ಅರ್ಹರೇ, ಅವರಿಗೆ ಮನೆ ದೊರಕಿದೆಯೇ ಎಂಬುದನ್ನು ಖಾತರಿಪಡಿಸುವ ಜವಾಬ್ದಾರಿಯೂ ಸಮಿತಿಯದು' ಎಂದು ನಮ್ಮ ರಾಜ್ಯದ ವಸತಿ ಸಚಿವರಾದ ವಿ.ಸೋಮಣ್ಣ ದಿನಾಂಕ: 11–12–2019ರಂದು ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು ಎಂದು ದಿನಾಂಕ: 12–12–2019ರ ಪ್ರಜಾವಾಣಿಯಲ್ಲಿ ಪ್ರಕಟವಾಗಿದೆ. ಅಲ್ಲದೇ ಈ ವಿಷಯ ಬೇರೆ ಬೇರೆ ಪತ್ರಿಕೆಗಳಲ್ಲಿಯೂ, ಸುದ್ದಿ ವಾಹಿನಿಗಳಲ್ಲಿಯೂ ಬಿತ್ತರವಾಗಿದೆ.

ಸರ್ಕಾರ ಆಶ್ರಯ ಮನೆಗಳ ಹಂಚಿಕೆಯಲ್ಲಿ ವ್ಯಾಪಕವಾಗಿರುವ ಅಕ್ರಮ ಹಾಗೂ ಹಣದ ದುರುಪಯೋಗಕ್ಕೆ ಕಡಿವಾಣ ಹಾಕಬೇಕಾಗಿದೆ ಎಂಬ ನೆಪವೊಡಿ ಗ್ರಾಮ ಸಭೆಯ ಪರಮಾಧಿಕಾರವನ್ನೇ ಕಿತ್ತುಕೊಳ್ಳುವ ನಿರ್ಧಾರಕ್ಕೆ ಮುಂದಾಗಿರುವುದು ಸರಿಯಲ್ಲ. ವಸತಿ ಫಲಾನುಭವಿಗಳ ಆಯ್ಕೆಯ ಗ್ರಾಮ ಸಭೆಯ ಹಕ್ಕನ್ನು ಮೊಟಕುಗೊಳಿಸುವ, ಸ್ಥಳೀಯ ಸ್ವಯಂ ಸರ್ಕಾರವಾದ ಗ್ರಾಮ ಪಂಚಾಯತ್‌ನ ಅಧಿಕಾರವನ್ನು ಕಿತ್ತುಕೊಳ್ಳುವ ಪ್ರಯತ್ನ ಒಪ್ಪತಕ್ಕದ್ದಲ್ಲ. ಸ್ವ–ಹಿತಾಸಕ್ತಿಗಾಗಿ, ಅಧಿಕಾರಶಾಹಿ ಆಡಳಿತಕ್ಕಾಗಿ, ಕೇಂದ್ರೀಕೃತ ರಾಜಕೀಯಕ್ಕಾಗಿ ಪ್ರಜಾಪ್ರಭುತ್ವದ ಬೇರಿನ ಸಾರವನ್ನೇ ತಿರುಚಲು ಹೊರಟಂತಹ ಸರ್ಕಾರದ ಈ ನಡೆ ಯಾವುದೇ ಕಾರಣಕ್ಕೂ ಒಪ್ಪತಕ್ಕದ್ದಲ್ಲ.

ಸಂವಿಧಾನಾತ್ಮಕವಾಗಿಯಾಗಲೀ, ಕಾನೂನಾತ್ಮಕವಾಗಿಯಾಗಲೀ, ಪ್ರಜಾಪ್ರಭುತ್ವದ ಆಶಯದಂತಾಗಲೀ, ಸಾಮಾಜಿಕ ನ್ಯಾಯದಡಿಯಲ್ಲಾಗಲೀ, ಮಹಾತ್ಮರ ಕನಸಿನಂತಾಗಲೀ ಹೇಗೇ ನೋಡಿದರೂ ಗ್ರಾಮ ಸಭೆಯ ಹಕ್ಕಾಗಿದ್ದ ಫಲಾನುಭವಿಗಳ ಆಯ್ಕೆಯ ಮತ್ತು ಆ ಪಟ್ಟಿಯನ್ನು ಅಂತಿಮಗೊಳಿಸುವ ಅಧಿಕಾರವನ್ನು ಅಧಿಕಾರಿಗಳ, ಶಾಸಕರ ಹಿಡಿತದಲ್ಲಿರುವ ಜಾಗೃತ ಸಮಿತಿಗೆ ನೀಡಲು ಹೊರಟಿರುವ ತಮ್ಮ ಸರ್ಕಾರದ ನಿರ್ಧಾರ ಇಡೀ ಪ್ರಜಾಪ್ರಭುತ್ವದ ವ್ಯವಸ್ಥೆಗೇ ಮಾರಕವಾದುದು.

ಈ ಹಿಂದೆ 2017ರಲ್ಲಿ ಉಚ್ಚ ನ್ಯಾಯಾಲಯದಿಂದ ಈ ಕುರಿತಾಗಿ ನೀಡಿರುವ ತಡೆಯಾಜ್ಞೆ ಇನ್ನೂ ಜಾರಿಯಲ್ಲಿರುವಾಗಲೇ ಸರ್ಕಾರ ಕಾನೂನು ತಿದ್ದುಪಡಿಗೆ ತೆರೆ ಮರೆಯಲ್ಲಿ ಪ್ರಯತ್ನ ಮಾಡುತ್ತಿದೆ. ವಿಧಾನ ಪರಿಷತ್ ಸದಸ್ಯರ ಹೇಳಿಕೆಯ ಪ್ರಕಾರ ಸರ್ಕಾರ ಈಗಾಗಲೇ ಆ ಪ್ರಕ್ರಿಯೆಯಲ್ಲಿ ತೊಡಗಿದೆ.

***3. ಪ್ರಸ್ತುತ ಇರುವ ಜವಾಬ್ದಾರಿ ನಕ್ಷೆಯನ್ನು ನಿರ್ಲಕ್ಷಿಸಿ, ಜವಾಬ್ದಾರಿ ನಕ್ಷೆಯನ್ನು ಪುನರ್ರಚಿಸುವ ಸರ್ಕಾರದ ಕ್ರಮ:***

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಪ್ರಕಟವಾಗುವ ಪತ್ರಿಕೆ ನವೆಂಬರ್ 2019ರ 'ಕರ್ನಾಟಕ ವಿಕಾಸ'ದಲ್ಲಿ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ಸಲಹೆಗಾರರಾದ ಶ್ರೀ ಎಂ.ಕೆ. ಕೆಂಪೇಗೌಡ ಅವರು ಮಾಡಿರುವ ವರದಿಯಲ್ಲಿ *"ದಿನಾಂಕ 19–10–2019ರಂದು ಮಾನ್ಯ ಪಂಚಾಯತ್ ರಾಜ್ ಸಚಿವರ ಜೊತೆ ನಡೆದ ಸಭೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನದ 73ನೇ ತಿದ್ದುಪಡಿಯ ಆಶಯದಂತೆ 29 ವಿಷಯಗಳನ್ನೊಳಗೊಂಡ ಪ್ರಕಾರ್ಯಗಳನ್ನು, ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆ 1993ರ ಅನುಸೂಚಿ–I, II & IIIರಲ್ಲಿ ವಿವರಿಸಲಾಗಿದೆ. ಆದಾಗ್ಯೂ ಬಹಳಷ್ಟು ಕಾರ್ಯಕ್ರಮಗಳು ನಿಜವಾದ ಅರ್ಥದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ವರ್ಗಾವಣೆಯಾಗದಿರುವ ಅಂಶಗಳನ್ನು ವಿವರಿಸಲಾಯಿತು. ಈ ದಿಸೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಜವಾಬ್ದಾರಿ ನಕ್ಷೆಯನ್ನು ಸಿದ್ಧಪಡಿಸುವ ಪ್ರಕ್ರಿಯೆ*

*ನಡೆಯುತ್ತಿದ್ದು ಆದಷ್ಟು ಬೇಗ ಅಂತಿಮಗೊಳಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಸೂಚಿಸಿದರು"* ಎಂದು ಹೇಳಿದ್ದಾರೆ.

ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ (ರಮೇಶ್ ಕುಮಾರ್ ಸಮಿತಿಯು) ಸಮಿತಿಯು ಮಸೂದೆಯನ್ನು ಮಂಡಿಸಿ, ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ (ತಿದ್ದುಪಡಿ) ಮಸೂದೆ, 2014 ಮತ್ತು ಸಮಿತಿಯ ವರದಿ 'ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ಯದ ಪಥ'ವನ್ನು ಸರ್ಕಾರದ ಮುಂದೆ ಮಂಡಿಸುವಾಗ, ಪೂರಕ ತತ್ವದ (principle of 'subsidiarity') ಆಧಾರದಲ್ಲಿ ತ್ರಿಸ್ಥರ ಪಂಚಾಯತ್‌ಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ಹಂಚಿಕೆ ಮಾಡಿ ತಯಾರಿಸಿದ ವಿವರವಾದ ಜವಾಬ್ದಾರಿ ನಕ್ಷೆಯನ್ನೂ ಸಹ ಸರ್ಕಾರಕ್ಕೆ ಸಲ್ಲಿಸಿದೆ. ಇದನ್ನು ಅಂಗೀಕರಿಸಿದ್ದರಿಂದಲೇ ತಿದ್ದುಪಡಿ ಕಾಯಿದೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರಲ್ಲಿ 'ಜವಾಬ್ದಾರಿ ನಕ್ಷೆ'ಯ ವ್ಯಾಖ್ಯೆ ಸೇರ್ಪಡೆಗೊಂಡಿದೆ. ಅಲ್ಲದೇ ಕಾಯಿದೆಯಲ್ಲಿ ಅನ್ವಯವಾಗುವ ಹಾಗೂ ಅಗತ್ಯವಿರುವ ಪ್ರಕರಣಗಳಲ್ಲಿ 'ಜವಾಬ್ದಾರಿ ನಕ್ಷೆಗೆ ಅನುಗುಣವಾಗಿ' ಎಂದು ಉಲ್ಲೇಖಿಸಲಾಗಿದೆ. (ಉಲ್ಲೇಖ: ಕಾಯಿದೆಯ ವ್ಯಾಖ್ಯೆ: 28–ಸಿ, ಪ್ರಕರಣ: 58(5), ಪ್ರಕರಣ: 309ಬಿ–3, ಅನುಸೂಚಿ–*I* ರಲ್ಲಿ). ವಿಷಾಧಕರ ಸಂಗತಿಯೆಂದರೆ ಗೆಜೆಟ್ ಅಧಿಸೂಚನೆಯಲ್ಲಿ ಜವಾಬ್ದಾರಿ ನಕ್ಷೆಯನ್ನು ನಿಯಮವಾಗಿ ಕಾಯಿದೆಯ ಭಾಗವಾಗಿ ಸೇರಿಸುವಲ್ಲಿ ಲೋಪವಾಗಿದೆ.

ಈ ಬಗ್ಗೆ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಇಲಾಖೆಯನ್ನು ಪ್ರಶ್ನಿಸಿದಾಗ

1. 19–11–2016ರಂದು ಅಂದಿನ ಸರ್ಕಾರವು ಒಂದು ಆದೇಶವನ್ನು ನೀಡಿತು. ಅದರಲ್ಲಿ ಕಾಯಿದೆಯ ಭಾಗವಾಗಿರುವ ಅನುಸೂಚಿಗಳನ್ನೇ 'ಜವಾಬ್ದಾರಿ ನಕ್ಷೆ' ಎಂದು ಪುನರ್ ನಾಮಕರಣ ಮಾಡಿತು! ಸ್ಥಳೀಯ ಸರ್ಕಾರಗಳನ್ನು ದುರ್ಬಲಗೊಳಿಸುವ, ರಾಜ್ಯ ನಿಯಂತ್ರಣವನ್ನು ಶಾಶ್ವತವಾಗಿಸುವ ಮತ್ತು ಹಣಕಾಸಿನ ಮೇಲೆ ಸಮಾನಾಂತರ ರಾಜ್ಯ ಸಂಸ್ಥೆಗಳ ಹಿಡಿತವನ್ನು ಹೆಚ್ಚಿಸುವ ಆಶಯ ಹೊಂದಿದ, ಕೇವಲ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಸೇವೆಯನ್ನಷ್ಟೇ ಸ್ಥಳೀಯ ಸರ್ಕಾರಗಳ ವ್ಯಾಪ್ತಿಗೆ ನೀಡುವ ಜಾಳುಜಾಳಾದ, ಪರಿಣಾಮಕಾರಿಯಲ್ಲದ 3ಎಫ್‌ಗಳ ಹಸ್ತಾಂತರವು ಅವರ ಆಶಯವಾಗಿತ್ತು.
2. ಸರ್ಕಾರದ ಈ ಕ್ರಮವನ್ನು ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನವು ಪ್ರಶ್ನಿಸಿದಾಗ, ದಿನಾಂಕ 16–05–2018ರಂದು ಸರ್ಕಾರವು, ಪುನಃ ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಅನುಸೂಚಿಗಳಿಗನುಗುಣವಾಗಿರುವ ತ್ರಿಸ್ಥರ ಪಂಚಾಯತ್‌ಗಳ ಪ್ರಕಾರ್ಯಗಳನ್ನೇ 'ಜವಾಬ್ದಾರಿ ನಕ್ಷೆ' ಎಂದು ಉಲ್ಲೇಖಿಸಿ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜವಾಬ್ದಾರಿ ನಕ್ಷೆ, ಮೇಲ್ವಿಚಾರಣೆ) ನಿಯಮಗಳು, 2018' ಎಂಬ ಸರ್ಕಾರಿ ಆದೇಶವನ್ನು ಹೊರಡಿಸಿತು! ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನವು ಪುನಃ ಇದನ್ನು ಪ್ರಶ್ನಿಸಿತು.

   ಅಂದಿನ ಸರ್ಕಾರವು ಮೊದಲನೇ ಪ್ರಯತ್ನದಲ್ಲಿ **ಅನುಸೂಚಿಗಳನ್ನೇ ಜವಾಬ್ದಾರಿ ನಕ್ಷೆ** ಎಂದು ಪುನರ್‌ಪಟ್ಟಿ ಮಾಡಿದರೆ, ನಂತರ ಬಂದ ಸರ್ಕಾರವು ನಡೆಸಿದ ಪ್ರಯತ್ನದಲ್ಲಿ **ಪಂಚಾಯತ್ ಪ್ರಕಾರ್ಯಗಳನ್ನೇ ಜವಾಬ್ದಾರಿ ನಕ್ಷೆ** ಎಂದು ಬಿಂಬಿಸಿತ್ತು! ಈಗ, ಇಂದಿನ ಸರ್ಕಾರವು 2016ರಲ್ಲಿಯೇ ಅಧಿಸೂಚನೆಯಾಗಿ ನಿಯಮವಾಗಬೇಕಾಗಿದ್ದ **'ಜವಾಬ್ದಾರಿ ನಕ್ಷೆ'ಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, ಹೊಸ ಜವಾಬ್ದಾರಿ ನಕ್ಷೆಯನ್ನು ರೂಪಿಸುವ ಪ್ರಕ್ರಿಯೆಗೆ ಕೈ ಹಾಕುತ್ತಿರುವುದು** 'Subsidiarity' ತತ್ವವನ್ನೇ ಬದಿಗೆ ತಳ್ಳುವ ಪ್ರಯತ್ನ ಮಾಡುತ್ತಿದೆ ಎಂದು ಅನ್ನಿಸುತ್ತಿದೆ. ಸ್ಥಳೀಯ ಸ್ವಯಂ ಸರ್ಕಾರಗಳ ಅಧಿಕಾರವನ್ನು ಮೊಟಕುಗೊಳಿಸಲು, ಮಹತ್ತರ ತಿದ್ದುಪಡಿಗಳನ್ನು ಒಳಗೊಂಡಿರುವ ಕಾಯಿದೆಯ ಮೂಲ ಆಶಯವನ್ನೇ ದುರ್ಬಲಗೊಳಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿರುವುದು ನಿಚ್ಚಳವಾಗಿ ಕಂಡುಬರುತ್ತಿದೆ.

4. ***ಕೊರೊನಾದಿಂದಾಗಿ ಉಂಟಾಗಿರುವ ಪರಿಸ್ಥಿತಿಯಿಂದಾಗಿ 3 ತಿಂಗಳುಗಳ ಕಾಲ ಗ್ರಾಮ ಪಂಚಾಯತ್ ಚುನಾವಣೆ ಮುಂದೂಡುವಿಕೆ. ಇದೇ ಪರಿಸ್ಥಿತಿ ಮುಂದುವರಿದರೆ, ತೆಗೆದುಕೊಳ್ಳಬೇಕಾದ ಕ್ರಮಗಳು ಅಥವಾ ಕಾರ್ಯತಂತ್ರಗಳು:***

   ಸರ್ಕಾರದ ಈಗಿನ ಎಲ್ಲಾ ನಡೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಪ್ರಸ್ತಾಪಿತ ತಿದ್ದುಪಡಿಗಳನ್ನು ಅನುಷ್ಠಾನಗೊಳಿಸಿ, ಚುನಾವಣೆ ನಡೆಸುವ ಹುನ್ನಾರ ನಡೆಸಿದೆ ಎನ್ನಿಸುತ್ತದೆ. ಕೊರೊನಾದಿಂದಾಗಿ ಉಂಟಾಗಿರುವ ಪರಿಸ್ಥಿತಿಯಿಂದಾಗಿ 3 ತಿಂಗಳುಗಳ ಕಾಲ ಚುನಾವಣೆ ಮುಂದೂಡಲಾಗಿದೆ ಎಂದು ಹೇಳಿದೆ. ಇದೇ ಪರಿಸ್ಥಿತಿ ಮುಂದುವರಿದರೆ, ಆಡಳಿತಾಧಿಕಾರಿ ನೇಮಕದ ಬದಲಿಗೆ ಪ್ರಸ್ತುತ ಅಧಿಕಾರದಲ್ಲಿರುವ ಪಂಚಾಯತ್ ವ್ಯವಸ್ಥೆಯೇ ಚುನಾವಣೆಯಾಗುವವರೆಗೆ ತಾತ್ಕಾಲಿಕವಾಗಿ ಮುಂದುವರಿಯುವಂತೆ ಮಾಡುವುದು ಒಳ್ಳೆಯದು ಅನ್ನಿಸುತ್ತದೆ.

ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಪರವಾಗಿ